ಕರ್ನಾಟಕ ಸರ್ಕಾರ

ಕೇಂದ್ರೀಕೃತ ದಾಖಲಾತಿ ಘಟಕ, ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ,
ಕೆಂಪೇಗೌಡ ರಸ್ತೆ, ಬೆಂಗಳೂರು-560 009.
ದೂರವಾಣಿ ಸಂಖ್ಯೆ: 080- 22483140, 22483145
ಇ-ಮೇಲ್ ವಿಳಾಸ: kartetcac@gmail.com

# ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ - 2025

## ಅಧಿಸೂಚನೆ

ಸಂಖ್ಯೆ: DPI-CPI0CAC(KTET)/4/2025-CAC – Date: 18/10/2025

### ಪ್ರಮುಖ ದಿನಾಂಕಗಳು

1. ಅರ್ಜಿ ಸಲ್ಲಿಕೆ (Online): ದಿನಾಂಕ:23/10/2025 ರಿಂದ 09/11/2025 ರವರೆಗೆ
2. ಪರೀಕ್ಷೆ ದಿನಾಂಕ: (Offline)

ಪತ್ರಿಕೆ-1: ದಿನಾಂಕ : 07/12/2025, ಭಾನುವಾರ

ಸಮಯ : 9.30am ರಿಂದ 12.00am ವರೆಗೆ

ಪತ್ರಿಕೆ-2: ದಿನಾಂಕ-07/12/2025, ಭಾನುವಾರ

ಸಮಯ : 2.00pm ರಿಂದ 4.30pm ವರೆಗೆ

For More Info Visit
knclingarajuedu.com

# ಹಿನ್ನೆಲೆ: (BACKGROUND)

ಆರ್.ಟಿ.ಇ ಕಾಯ್ದೆಯ ಸೆಕ್ಷನ್ 23 ಉಪ ವಿಭಾಗ(1)ರ ನಿಬಂಧನೆಗಳ ಅನುಸಾರ 23 ಆಗಸ್ಟ್ 2010, 29 ಜುಲೈ 2011 ಮತ್ತು 28 ಜೂನ್ 2018 ರ ಅಧಿಸೂಚನೆಯಂತೆ ರಾಷ್ಟ್ರೀಯ ಶಿಕ್ಷಣ ಶಿಕ್ಷಕರ ಪರಿಷತ್(NCTE) 1 ರಿಂದ 8ನೇ ತರಗತಿಗಳ ಶಿಕ್ಷಕರಾಗಿ ನೇಮಕಾತಿಗೆ ಅರ್ಹರಾಗಲು ಕನಿಷ್ಠ ಅರ್ಹತೆಗಳನ್ನು ನಿಗದಿಪಡಿಸಿದೆ.

ಆರ್.ಟಿ.ಇ ಕಾಯ್ದೆ 2ನೇ ವಿಭಾಗದಲ್ಲಿ ಷರತ್ತು(ಎನ್) ನಲ್ಲಿ ಉಲ್ಲೇಖಿಸಲ್ಪಟ್ಟಿರುವಂತೆ ಯಾವುದೇ ಶಾಲೆಗಳಲ್ಲಿ ಶಿಕ್ಷಕರಾಗಿ ನೇಮಕಾತಿಗೆ ಅರ್ಹತೆ ಪಡೆಯಲು NCTE ಯಿಂದ ರೂಪಿಸಲಾದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಸೂಕ್ತ ಸರ್ಕಾರದ ಮೂಲಕ ನಡೆಸಲಾಗುವ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ (ಟಿ.ಇ.ಟಿ.) ಉತ್ತೀರ್ಣರಾಗಿರಬೇಕು.

ಶಿಕ್ಷಕರಾಗಿ ನೇಮಕಾತಿಗೆ ಅರ್ಹರಾಗಲು ಟಿ.ಇ.ಟಿ. ಯನ್ನು ಕನಿಷ್ಟ ಅರ್ಹತೆಯನ್ನಾಗಿ ಅಳವಡಿಸುವ ಉದ್ದೇಶಗಳು:

1. ನೇಮಕಾತಿ ಪ್ರಕ್ರಿಯೆಯಲ್ಲಿ ರಾಷ್ಟ್ರೀಯ ಮಾನದಂಡಗಳನ್ನು ಮತ್ತು ಶಿಕ್ಷಕರ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸಲು.
2. ಶಿಕ್ಷಕ ಶಿಕ್ಷಣ ಸಂಸ್ಥೆಗಳು ಮತ್ತು ಪ್ರಶಿಕ್ಷಣಾರ್ಥಿಗಳು ತಮ್ಮ ಕಾರ್ಯಕ್ಷಮತೆಯ ಸುಧಾರಣೆಯನ್ನು ಪ್ರೇರೇಪಿಸಲು.
3. ಸರ್ಕಾರವು ಶಿಕ್ಷಕರ ಶೈಕ್ಷಣಿಕ ಗುಣಮಟ್ಟಕ್ಕೆ ವಿಶೇಷ ಒತ್ತು ನೀಡುತ್ತದೆ ಎಂಬ ಸಕಾರಾತ್ಮಕ ಸಂದೇಶವನ್ನು ಎಲ್ಲಾ ಭಾಗಿದಾರರಿಗೆ ನೀಡಲು.

ಕರ್ನಾಟಕ ಸರ್ಕಾರವು ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು (KARTET) ನಡೆಸುವ ಜವಾಬ್ದಾರಿಯನ್ನು ಕೇಂದ್ರೀಕೃತ ದಾಖಲಾತಿ ಘಟಕ (ಸಿ.ಎ.ಸಿ), ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕೆ.ಜಿ ರಸ್ತೆ ಬೆಂಗಳೂರು ಇವರಿಗೆ ವಹಿಸಿದೆ.

## 1. <u>ಸಂಕ್ಷಿಪ್ತ ಶೀರ್ಷಿಕೆ</u> (Short Title)

ಈ ನಿಯಮಗಳನ್ನು "ಶಿಕ್ಷಕರ ಅರ್ಹತಾ ಪರೀಕ್ಷೆ (TET)" ನಿಯಮಗಳು-2011 ಎಂದು ಕರೆಯಲಾಗುತ್ತದೆ.

## 2. <u>ವ್ಯಾಖ್ಯಾನಗಳು</u>

1. "ಸರ್ಕಾರ" ಎಂದರೆ "ಕರ್ನಾಟಕ ಸರ್ಕಾರ"
2. "ಸಚಿವಾಲಯ" ಎಂದರೆ "ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು"
3. "ಸಿ.ಎ.ಸಿ" ಎಂದರೆ "ಕೇಂದ್ರೀಕೃತ ದಾಖಲಾತಿ ಘಟಕ", ಬೆಂಗಳೂರು.
4. "ಶಾಲೆ" ಎಂದರೆ ಈ ಉದ್ದೇಶಕ್ಕಾಗಿ ಆರ್.ಟಿ.ಇ-2009ರ ಪ್ರಕಾರ KARTETಗೆ ಅನ್ವಯವಾಗುವ ಎಲ್ಲಾ ಶಾಲೆಗಳು.
5. "KARTET" ಎಂದರೆ "ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ".
6. "ಪರಿಶಿಷ್ಟ ಜಾತಿ" ಅಂದರೆ "ಭಾರತ ಸರ್ಕಾರದಿಂದ ಅಧಿಸೂಚಿಸಿರುವ ಪರಿಶಿಷ್ಟ ಜಾತಿಗಳು".
7. "ಪರಿಶಿಷ್ಟ ಪಂಗಡಗಳು" ಅಂದರೆ "ಭಾರತ ಸರ್ಕಾರದಿಂದ ಅಧಿಸೂಚಿಸಿರುವ ಪರಿಶಿಷ್ಟ ಪಂಗಡಗಳು".

8. "ವಿಶೇಷ ಚೇತನ/ದಿವ್ಯಾಂಗ ವ್ಯಕ್ತಿಗಳು" ಎಂದರೆ "ಕರ್ನಾಟಕ ಸರ್ಕಾರದ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂತೆ ವಿಶೇಷ ಚೇತನವುಳ್ಳ ವ್ಯಕ್ತಿಗಳು ಎಂದು ಅರ್ಥ".

೯. **"ಪರೀಕ್ಷಾ ಪ್ರಾಧಿಕಾರ (Examination Authority)" ಎಂದರೆ "ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು".**

## ೩. ಅರ್ಹತೆ

**ರಾಷ್ಟ್ರೀಯ ಶಿಕ್ಷಣ ಶಿಕ್ಷಕರ ಪರಿಷತ್ (NCTE) ನ ಪತ್ರಸಂಖ್ಯೆ: NCTE-Reg1018/1135/2018-US (Regulation Section)-HQ Dated-04/08/2022 ರ ಆದೇಶ "as per dictionary meaning, the word "pursuing" means undergoing and/or proceeding further. Therefore, a candidate who has been admitted in any of the TTC and undergoing teacher training course (TTC) can be said to be "pursuing" such teacher training course and shall be eligible to appear in TET examination, irrespective of the fact that whether, by the last date specified for filling up the online form for TET examination he has, in fact, appeared in the examination of the concerned teacher training course and the result is awaited. "Pursuing" the requisite teacher training course is sufficient to make such a candidate eligible to appear in the TET examination. Therefore, on a fair reading of Clause 5(ii) of the NCTE guidelines, a person who has been admitted in TTC and is pursuing, he/she can appear in the TET examination". ನ ಪ್ರಕಾರ ಅಗತ್ಯವಿರುವ ಕನಿಷ್ಠ ವಿದ್ಯಾರ್ಹತೆ ಹೊಂದಿರಬೇಕು.**

## 4. ಅಭ್ಯರ್ಥಿಗಳಿಗೆ ಸೂಚನೆಗಳು:

1. ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ-2025 ಕ್ಕೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ದಿನಾಂಕ: **23/10/2025** ರಿಂದ **09/11/2025**ರ ಒಳಗಾಗಿ ಇಲಾಖಾ ವೆಬ್‌ಸೈಟ್ https://schooleducation.karnataka.gov.in ಗೆ login ಆಗಿ ಅರ್ಜಿ ಸಲ್ಲಿಸುವುದು.
2. ಆನ್‌ಲೈನ್ ಅರ್ಜಿಯಲ್ಲಿ ಅಗತ್ಯವಿರುವ ಎಲ್ಲಾ ಮಾಹಿತಿಗಳನ್ನು ಪೂರ್ಣವಾಗಿ ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು ತಮ್ಮ ನೊಂದಣಿ ಸಂಖ್ಯೆ ಹಾಗೂ ಪೂರ್ಣ ವಿವರಗಳನ್ನೊಳಗೊಂಡ ಅರ್ಜಿಯ ಕಂಪ್ಯೂಟರ್ ಜನರೇಟೆಡ್ ಪ್ರತಿಯ Print out ನ್ನು ಪಡೆದುಕೊಳ್ಳುವುದು.
3. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಅರ್ಜಿ ಸಲ್ಲಿಸಿದಲ್ಲಿ, ಅವರು ಹೆಚ್ಚುವರಿಯಾಗಿ ಸಲ್ಲಿಸುವ ಅರ್ಜಿಗೆ ಪ್ರತ್ಯೇಕ ಶುಲ್ಕವನ್ನು ಪಾವತಿಸಬೇಕು.

## ೫. ಆನ್‌ಲೈನ್ ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ಕ್ರಮ:

1. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಮೊದಲು ಅಭ್ಯರ್ಥಿಗಳು ಇಲಾಖಾ ವೆಬ್‌ಸೈಟ್ https://schooleducation.karnataka.gov.in ಸಂಪರ್ಕಿಸಿ ಅಧಿಸೂಚನೆಯಲ್ಲಿ ನೀಡಲಾಗಿರುವ ಸೂಚನೆಗಳನ್ನು ತಪ್ಪದೇ ಓದಿ, ಅರ್ಥೈಸಿಕೊಳ್ಳುವುದು.
2. 'Registration' ಆದ ನಂತರ 'Login' ಆಗಿ ಆನ್‌ಲೈನ್ ಅರ್ಜಿಯನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿ ಸಲ್ಲಿಸುವುದು.
3. User ID ಮತ್ತು Password ಅನ್ನು ಅಭ್ಯರ್ಥಿಗಳು ಇತರರಿಗೆ ಸಿಗದಂತೆ/ ಗೊತ್ತಾಗದಂತೆ ಅತ್ಯಂತ ಜಾಗರೂಕತೆಯಿಂದ ಸಂರಕ್ಷಿಸಿಕೊಳ್ಳತಕ್ಕದ್ದು, ಒಂದು ವೇಳೆ ತಮ್ಮ User ID ಮತ್ತು Password ಇತರೆ ಯಾರಿಗಾದರೂ ಲಭ್ಯವಾದಲ್ಲಿ ತಮ್ಮ ಹೆಸರಿನಿಂದ ಲಾಗಿನ್ ಆಗಿ ತಮ್ಮ ಮಾಹಿತಿಯನ್ನು ವ್ಯತ್ಯಾಸ ಮಾಡುವ ಅಥವಾ ವಿರೂಪಗೊಳಿಸುವ ಸಾಧ್ಯತೆಯಿರುತ್ತದೆ. ಇದಕ್ಕೆ ಸಿ.ಎ.ಸಿ ಜವಾಬ್ದಾರಿಯಾಗಿರುವುದಿಲ್ಲ.
4. ಅಭ್ಯರ್ಥಿಯು Passport ಅಳತೆಯ (ಎದುರು ಭಂಗಿಯಲ್ಲಿ ಇರುವಂತಹ) ಭಾವಚಿತ್ರವನ್ನು 50KB ಗೆ ಮೀರದಂತೆ ಹಾಗೂ ಕಪ್ಪು ಶಾಹಿಯಲ್ಲಿ ಮಾಡಿರುವ ಸಹಿಯನ್ನು 40KB ಗೆ ಮೀರದಂತೆ ಸ್ಕ್ಯಾನ್ ಮಾಡಿ ನಿಗದಿತ ಅಂಕಣದಲ್ಲಿ ಅಪ್‌ಲೋಡ್ ಮಾಡುವುದು.
5. ಅಭ್ಯರ್ಥಿಯ ಭಾವಚಿತ್ರ, ಸಹಿ ಹಾಗೂ ಹೆಸರು ತಾಳೆ ಆಗದಿದ್ದಲ್ಲಿ, ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದಿಲ್ಲ.
6. ಪರೀಕ್ಷಾ ಶುಲ್ಕವನ್ನು Internet Banking / Debit Card/ Credit Card ಅಥವಾ ಬ್ಯಾಂಕ್ ಚಲನ್ (ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕಿನಲ್ಲಿ ಮಾತ್ರ) ಮೂಲಕವೇ ಪಾವತಿಸತಕ್ಕದ್ದು.
7. ಅಭ್ಯರ್ಥಿಗಳು ಒಮ್ಮೆ ಪಾವತಿಸಿರುವ ಪರೀಕ್ಷಾ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿಯೂ ಮರುಪಾವತಿ ಮಾಡುವುದಿಲ್ಲ ಅಥವಾ ಮುಂದಿನ ಪರೀಕ್ಷೆಗಳಿಗೆ ಹೊಂದಾಣಿಕೆ ಮಾಡಲಾಗುವುದಿಲ್ಲ.
8. **INTERNET /SERVER** ನ ಒತ್ತಡವನ್ನು ತಪ್ಪಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ಕಾಯದೇ ಮುಂಚಿತವಾಗಿ ಅರ್ಜಿ ಸಲ್ಲಿಸುವುದು.
9. ಅಭ್ಯರ್ಥಿಗಳು ತಮ್ಮ ಆನ್‌ಲೈನ್ ಅರ್ಜಿಗಳನ್ನು ಇಲಾಖಾ ವೆಬ್‌ಸೈಟ್ ಮೂಲಕ login ಆಗಿ ಡೌನ್‌ಲೋಡ್ ಮಾಡಿಕೊಳ್ಳುವುದು. ಅರ್ಜಿ ಶುಲ್ಕ ಪಾವತಿಯಾದ ಎರಡು ದಿನಗಳ ನಂತರದಲ್ಲೂ ಪೇಮೆಂಟ್ ಸ್ಟೇಟಸ್ (Payment Status) ಪೆಂಡಿಂಗ್ ಎಂದು ಕಂಡುಬಂದಲ್ಲಿ ಕೇಂದ್ರೀಕೃತ ದಾಖಲಾತಿ ಘಟಕವನ್ನು ಸಂಪರ್ಕಿಸುವುದು.
10. ಅಭ್ಯರ್ಥಿಗಳು ಡೌನ್‌ಲೋಡ್ ಮಾಡಲಾದ ತಮ್ಮ ಅನ್‌ಲೈನ್ ಅರ್ಜಿಯನ್ನು ಮುಂದಿನ ದಿನಗಳಲ್ಲಿ ಯಾವುದೇ ಕಛೇರಿ ಸಂಬಂಧಿತ ಪತ್ರವ್ಯವಹಾರಕ್ಕಾಗಿ ತಮ್ಮ ಬಳಿ ಕಡ್ಡಾಯವಾಗಿ ಇರಿಸಿಕೊಳ್ಳುವುದು.
11. ಅಭ್ಯರ್ಥಿಗಳು ಅತ್ಯಂತ ಜಾಗರೂಕತೆಯಿಂದ ಆನ್‌ಲೈನ್ ಅರ್ಜಿಯನ್ನು ಭರ್ತಿಮಾಡಬೇಕು. ಅರ್ಜಿಯನ್ನು Submit ಮಾಡುವ ಮೊದಲು, ಭರ್ತಿ ಮಾಡಲಾದ ವಿವರಗಳನ್ನು ಇನ್ನೊಮ್ಮೆ ಪರಿಶೀಲಿಸಿಕೊಳ್ಳಬೇಕು. ಒಮ್ಮೆ ಅರ್ಜಿ ಸಲ್ಲಿಸಿದ ನಂತರ ಯಾವುದೇ ತಿದ್ದುಪಡಿ/ ಬದಲಾವಣೆಗೆ ಅವಕಾಶ ಇರುವುದಿಲ್ಲ.
12. ಅರ್ಜಿಯನ್ನು ಸಲ್ಲಿಸಿದ ನಂತರ ಅಭ್ಯರ್ಥಿಯ ಮಾಹಿತಿಯಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ ಅದರಿಂದ ಉಂಟಾಗುವ ಪರಿಣಾಮಗಳಿಗೆ ಅಭ್ಯರ್ಥಿಗಳೇ ಜವಾಬ್ದಾರರಾಗಿರುತ್ತಾರೆ.
13. ಅಭ್ಯರ್ಥಿಗಳು ಒಮ್ಮೆ ಮಾಹಿತಿ ತುಂಬಿ ಅಂತಿಮವಾಗಿ ಅರ್ಜಿ ಸಲ್ಲಿಸಿದ ಮೇಲೆ ಯಾವುದೇ ತಿದ್ದುಪಡಿಗೆ, ಹೊಸ ವಿವರಗಳನ್ನು ಅರ್ಜಿಯಲ್ಲಿ ಸೇರಿಸಲು ಅಥವಾ ತೆಗೆಯಲು (Edit ಗೆ) ಅವಕಾಶವಿರುವುದಿಲ್ಲ. ಈ ಸಂಬಂಧ ಉದ್ಭವಿಸುವ ಸಮಸ್ಯೆಗಳಿಗೆ ಕೇಂದ್ರೀಕೃತ ದಾಖಲಾತಿ ಘಟಕವು ಜವಾಬ್ದಾರಿಯಾಗಿರುವುದಿಲ್ಲ.

14. **KARTET-2025 ಕ್ಕೆ** ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಬಳಕೆಯಲ್ಲಿರುವಂತಹ ತಮ್ಮ ಸ್ವಂತ ಮೊಬೈಲ್‌ನ ಸಂಪರ್ಕ ಸಂಖ್ಯೆಯನ್ನು ಹಾಗೂ ಇ–ಮೇಲ್ ವಿಳಾಸವನ್ನು ಆನ್‌ಲೈನ್ ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸುವುದು.
15. ಹೆಚ್ಚುವರಿ ಮಾಹಿತಿಗಳನ್ನು ಪಡೆದುಕೊಳ್ಳಲು ಅಭ್ಯರ್ಥಿಗಳು ಆಗಿಂದಾಗ್ಗೆ ಇಲಾಖಾ ವೆಬ್‌ಸೈಟ್ https://schooleducation.karnataka.gov.in ನ್ನು ಸಂಪರ್ಕಿಸುವುದು.

## 6. ಪರೀಕ್ಷಾ ಶುಲ್ಕ ವಿವರ:

| ಪ್ರವರ್ಗ | ಪತ್ರಿಕೆ–1 ಅಥವಾ ಪತ್ರಿಕೆ–2 ಮಾತ್ರ | ಪತ್ರಿಕೆ–1 ಹಾಗೂ ಪತ್ರಿಕೆ–2 |
|---|---|---|
| ಸಾಮಾನ್ಯ ವರ್ಗ, 2ಎ, 2ಬಿ, 3ಎ ಮತ್ತು 3ಬಿ | ರೂ. 700–00 | ರೂ. 1000–00 |
| ಪ.ಜಾತಿ/ಪ.ವರ್ಗ/ಪ್ರವರ್ಗ–1 ಮಾತ್ರ | ರೂ. 350–00 | ರೂ. 500–00 |
| ವಿಶೇಷ ಚೇತನ/ದಿವ್ಯಾಂಗ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ಇರುತ್ತದೆ. | | |

## Bank transactional charges

| Mode of Payment | Bank | Amount | Pricing (Excl. taxes) |
|---|---|---|---|
| Internet Banking | All banks | Up to Rs. 500/- | Rs.5/- per transaction |
| | | Above Rs.500/- | Rs.10/- per transaction |
| Debit card | Visa, Master, Maestro, Rupay | Up to Rs.2000/- | 0.75% of the Trans. amount |
| | | Above Rs.2000/- | 0.90% of the trans. amount |
| Credit Card | Visa, Master, AMEX | - | 1.20% of the trans. amount |
| Challan | State Bank of India | - | - |

## 7. ಪ್ರವೇಶ ಪತ್ರ:

ಅಭ್ಯರ್ಥಿಗಳು **KARTET-2025ರ** ಪರೀಕ್ಷೆಯ **ಪ್ರವೇಶ ಪತ್ರವನ್ನು** ದಿನಾಂಕ: **01/12/2025 ರಿಂದ 07/12/2025** ರವರೆಗೆ ಇಲಾಖಾ ವೆಬ್‌ಸೈಟ್‌ನಲ್ಲಿ Login ಆಗಿ ಪಡೆದುಕೊಳ್ಳುವುದು.

ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ಸಲ್ಲಿಸಿರುವ ಮಾಹಿತಿಯು ಪ್ರವೇಶ ಪತ್ರದಲ್ಲಿ ನಮೂದಾಗಿರುತ್ತದೆ. ಆದ್ದರಿಂದ ಅಭ್ಯರ್ಥಿಗಳ ಮಾಹಿತಿ, ಭಾವಚಿತ್ರ ಹಾಗೂ ಅವರ ಸಹಿಗೆ ಸಂಬಂಧಪಟ್ಟಂತೆ ಏನಾದರೂ ವ್ಯತ್ಯಾಸವಿದ್ದಲ್ಲಿ ಸರಿಪಡಿಸಿಕೊಳ್ಳಲು ಅವಕಾಶವಿರುವುದಿಲ್ಲ ಹಾಗೂ ಈ ಸಂಬಂಧ ಉದ್ಭವಿಸುವ ಸಮಸ್ಯೆಗಳಿಗೆ ಕೇಂದ್ರೀಕೃತ ದಾಖಲಾತಿ ಘಟಕವು ಜವಾಬ್ದಾರಿಯಾಗಿರುವುದಿಲ್ಲ.

**ಆದ್ದರಿಂದ ತಮ್ಮ 'Login' ಹಾಗೂ 'Password' ನ್ನು ಅತ್ಯಂತ ಗೌಪ್ಯವಾಗಿ ಜಾಗರೂಕತೆಯಿಂದ ಇಟ್ಟುಕೊಳ್ಳಲು ತಿಳಿಸಿದೆ.**

## 7.1 ಶಿಕ್ಷಕರ ಅರ್ಹತಾ ಪರೀಕ್ಷೆ-2025 ರ ಪರೀಕ್ಷಾ ವೇಳಾಪಟ್ಟಿ:

| ಪರೀಕ್ಷಾ ದಿನಾಂಕ | ಪತ್ರಿಕೆ | ಪರೀಕ್ಷಾ ಸಮಯ | ಪರೀಕ್ಷಾ ಅವಧಿ |
|---|---|---|---|
| 07/12/2025 ಭಾನುವಾರ | ಪತ್ರಿಕೆ-1 | ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 12.00 ಗಂಟೆ | 2 ಗಂಟೆ 30 ನಿಮಿಷ |
| | ಪತ್ರಿಕೆ-2 | ಮಧ್ಯಾಹ್ನ 2.00 ರಿಂದ 4.30 ಗಂಟೆ | 2 ಗಂಟೆ 30 ನಿಮಿಷ |

**<u>ಸೂಚನೆ</u>: ವಿಶೇಷ ಚೇತನ/ದಿವ್ಯಾಂಗ ಅಭ್ಯರ್ಥಿಗಳಿಗೆ ಪ್ರತಿ ಗಂಟೆಗೆ 20 ನಿಮಿಷದಂತೆ,50 ನಿಮಿಷಗಳ ಹೆಚ್ಚುವರಿ ಸಮಯ ನೀಡಲಾಗುವುದು.**

## 7.2. ಪತ್ರಿಕೆ-1 (1 ರಿಂದ 5ನೇ ತರಗತಿಗಳಿಗೆ) ಅಗತ್ಯವಿರುವ ಕನಿಷ್ಠ ವಿದ್ಯಾರ್ಹತೆ:

ಪಿ.ಯು.ಸಿ/ ಸೀನಿಯರ್ ಸೆಕೆಂಡರಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಶೇ.50 ಅಂಕಗಳನ್ನು ಗಳಿಸಿರಬೇಕು ಹಾಗೂ ಎರಡು ವರ್ಷಗಳ D.El.Ed. ಕೋರ್ಸಿನ (ಯಾವ ಹೆಸರಿನಿಂದ ಕರೆಯುವರೋ ಆ ಹೆಸರಿನ) ದ್ವಿತೀಯ ವರ್ಷದಲ್ಲಿ ತೇರ್ಗಡೆ ಹೊಂದಿರುವವರು ಅಥವಾ ಕೋರ್ಸಿಗೆ ಪ್ರವೇಶ ಪಡೆದು ಅಭ್ಯಾಸ ಮಾಡುತ್ತಿರುವ ಅಭ್ಯರ್ಥಿಗಳು.

**ಅಥವಾ**

ಪಿ.ಯು.ಸಿ / ಸೀನಿಯರ್ ಸೆಕೆಂಡರಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಟ ಶೇ.50 ರಷ್ಟು ಅಂಕಗಳನ್ನು ಗಳಿಸಿರಬೇಕು ಹಾಗೂ ನಾಲ್ಕು ವರ್ಷಗಳ ಬ್ಯಾಚುಲರ್ ಇನ್ ಎಲಿಮೆಂಟರಿ ಎಜುಕೇಶನ್‌ನಲ್ಲಿ (B.El.Ed) ತೇರ್ಗಡೆ ಹೊಂದಿರುವವರು ಅಥವಾ ಪ್ರವೇಶ ಪಡೆದು ಅಭ್ಯಾಸ ಮಾಡುತ್ತಿರುವ ಅಭ್ಯರ್ಥಿಗಳು.

**ಅಥವಾ**

ಸೀನಿಯರ್ ಸೆಕೆಂಡರಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಟ ಶೇ.50 ರಷ್ಟು ಅಂಕಗಳನ್ನು ಗಳಿಸಿರಬೇಕು ಹಾಗೂ ಎರಡು ವರ್ಷಗಳ ಡಿಪ್ಲೊಮೋ ಇನ್ ಎಜುಕೇಶನ್ (ವಿಶೇಷ ಶಿಕ್ಷಣ) ತೇರ್ಗಡೆ ಹೊಂದಿರುವವರು ಅಥವಾ ಪ್ರವೇಶ ಪಡೆದು ಅಭ್ಯಾಸ ಮಾಡುತ್ತಿರುವ ಅಭ್ಯರ್ಥಿಗಳು.

**ಅಥವಾ**

ಪದವಿಯಲ್ಲಿ ಕನಿಷ್ಟ ಶೇ.50 ರಷ್ಟು ಅಂಕಗಳನ್ನು ಗಳಿಸಿರಬೇಕು ಹಾಗೂ ಎರಡು ವರ್ಷಗಳ D.El.Ed. ಕೋರ್ಸಿನ (ಯಾವ ಹೆಸರಿನಿಂದ ಕರೆಯುವರೋ ಆ ಹೆಸರಿನ) ದ್ವಿತೀಯ ವರ್ಷದಲ್ಲಿ ತೇರ್ಗಡೆ ಹೊಂದಿರುವವರು ಅಥವಾ ಪ್ರವೇಶ ಪಡೆದು ಅಭ್ಯಾಸ ಮಾಡುತ್ತಿರುವ ಅಭ್ಯರ್ಥಿಗಳು.

**ಅಥವಾ**

ಪದವಿಯಲ್ಲಿ ಕನಿಷ್ಟ ಶೇ.50 ರಷ್ಟು ಅಂಕಗಳನ್ನು ಗಳಿಸಿರಬೇಕು ಹಾಗೂ ಬಿ.ಇಡಿ ಪದವಿಯಲ್ಲಿ ತೇರ್ಗಡೆ ಹೊಂದಿರುವವರು ಅಥವಾ ಪ್ರವೇಶ ಪಡೆದು ಅಭ್ಯಾಸ ಮಾಡುತ್ತಿರುವ ಅಭ್ಯರ್ಥಿಗಳು.

## 7.3. ಪತ್ರಿಕೆ-2 (6 ರಿಂದ 8ನೇ ತರಗತಿಗಳಿಗೆ) ಅಗತ್ಯವಿರುವ ಕನಿಷ್ಠ ವಿದ್ಯಾರ್ಹತೆ:

ಪದವಿಯಲ್ಲಿ ಕನಿಷ್ಟ ಶೇ.50 ರಷ್ಟು ಅಂಕಗಳನ್ನು ಗಳಿಸಿರಬೇಕು ಹಾಗೂ ಎರಡು ವರ್ಷಗಳ D.El.Ed ಕೋರ್ಸಿನ (ಯಾವ ಹೆಸರಿನಿಂದ ಕರೆಯುವರೋ ಆ ಹೆಸರಿನ) ದ್ವಿತೀಯ ವರ್ಷದಲ್ಲಿ ತೇರ್ಗಡೆ ಹೊಂದಿರುವವರು ಅಥವಾ D.El.Ed ಕೋರ್ಸಿಗೆ ಪ್ರವೇಶ ಪಡೆದು ಅಭ್ಯಾಸ ಮಾಡುತ್ತಿರುವ ಅಭ್ಯರ್ಥಿಗಳು.

**ಅಥವಾ**

ಪದವಿಯಲ್ಲಿ ಕನಿಷ್ಟ ಶೇ.50 ರಷ್ಟು ಅಂಕಗಳನ್ನು ಗಳಿಸಿರಬೇಕು ಹಾಗೂ ಬಿ.ಇಡಿ ಪದವಿಯಲ್ಲಿ ತೇರ್ಗಡೆ ಹೊಂದಿರುವವರು ಅಥವಾ ಬಿ.ಇಡಿ ಪದವಿಗೆ ಪ್ರವೇಶ ಪಡೆದು ಅಭ್ಯಾಸ ಮಾಡುತ್ತಿರುವ ಅಭ್ಯರ್ಥಿಗಳು.

**ಅಥವಾ**

ಪಿ.ಯು.ಸಿ/ ಸೀನಿಯರ್ ಸೆಕೆಂಡರಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಟ ಶೇ.50 ರಷ್ಟು ಅಂಕಗಳನ್ನು ಗಳಿಸಿರಬೇಕು ಹಾಗೂ ನಾಲ್ಕು ವರ್ಷಗಳ ಬ್ಯಾಚುಲರ್ ಇನ್ ಎಲಿಮೆಂಟರಿ ಎಜುಕೇಶನ್‌ನಲ್ಲಿ (B.El.Ed) ತೇರ್ಗಡೆ ಹೊಂದಿರುವವರು ಅಥವಾ B.El.Ed ಕೋರ್ಸಿಗೆ ಪ್ರವೇಶ ಪಡೆದು ಅಭ್ಯಾಸ ಮಾಡುತ್ತಿರುವ ಅಭ್ಯರ್ಥಿಗಳು.

**ಅಥವಾ**

ಪದವಿಯಲ್ಲಿ ಕನಿಷ್ಟ ಶೇ.50 ರಷ್ಟು ಅಂಕಗಳನ್ನು ಗಳಿಸಿರಬೇಕು ಹಾಗೂ ಎರಡು ವರ್ಷದ ಬಿ.ಇಡಿ (ವಿಶೇಷ ಶಿಕ್ಷಣ) ಪದವಿಯಲ್ಲಿ ತೇರ್ಗಡೆ ಹೊಂದಿರುವವರು ಅಥವಾ ಬಿ.ಇಡಿ (ವಿಶೇಷ ಶಿಕ್ಷಣ) ಪದವಿಗೆ ಪ್ರವೇಶ ಪಡೆದು ಅಭ್ಯಾಸ ಮಾಡುತ್ತಿರುವ ಅಭ್ಯರ್ಥಿಗಳು.

## 7.4. <u>ಸೂಚನೆ:-</u>

1) ಪರಿಶಿಷ್ಟ ಜಾತಿ/ಪರಿಶಿಷ್ಟವರ್ಗ/ಪ್ರವರ್ಗ-1/ವಿಶೇಷ ಚೇತನ/ ದಿವ್ಯಾಂಗ ಅಭ್ಯರ್ಥಿಗಳಿಗೆ ನಿಗದಿಪಡಿಸಿರುವ ಅರ್ಹ ವಿದ್ಯಾರ್ಹತೆಯಲ್ಲಿ ಅರ್ಹತಾ ಅಂಕಗಳಲ್ಲಿ ಶೇ.5 ರಷ್ಟು ವಿನಾಯಿತಿ ನೀಡಲಾಗಿದೆ.
2) ಎನ್.ಸಿ.ಟಿ.ಇ. ಯಿಂದ ಮಾನ್ಯತೆ ಪಡೆದಂತಹ **ಡಿಪ್ಲೋಮಾ/ಪದವಿ ಕೋರ್ಸುಗಳನ್ನು** ಮಾತ್ರ **ಕೆ.ಎಆರ್.ಟಿ.ಇ.ಟಿ.** ಪರೀಕ್ಷೆ ಬರೆಯಲು ವಿದ್ಯಾರ್ಹತೆಯಲ್ಲಿ ಪರಿಗಣಿಸಲಾಗಿದೆ. **ರಿಹ್ಯಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾ (RCI)** ದಿಂದ ಮಾನ್ಯತೆ ಪಡೆದಂತಹ ಡಿಪ್ಲೋಮಾ ಇನ್ ಎಜುಕೇಶನ್ (ವಿಶೇಷ ಶಿಕ್ಷಣ) ಹಾಗೂ ಬಿ.ಇಡಿ. (ವಿಶೇಷ ಶಿಕ್ಷಣ) ಪದವಿಯನ್ನು ಸಹ ಪರಿಗಣಿಸಲಾಗಿದೆ.
3) ಮೇಲ್ಕಾಣಿಸಿದ ಕನಿಷ್ಠ ವಿದ್ಯಾರ್ಹತೆಗಳು ಭಾಷೆ, ಗಣಿತ, ವಿಜ್ಞಾನ ಹಾಗೂ ಸಮಾಜ ವಿಜ್ಞಾನ ವಿಷಯಗಳ ಅಭ್ಯರ್ಥಿ/ಶಿಕ್ಷಕರಿಗೆ ಮಾತ್ರ ಅನ್ವಯಿಸುತ್ತದೆ.
4) ಮೇಲ್ಕಂಡ ಯಾವುದೇ ಕನಿಷ್ಟ ವಿದ್ಯಾರ್ಹತೆಗಳನ್ನು ಹೊಂದಿರದ ಅಭ್ಯರ್ಥಿಗ**ಳು "ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಗೆ" ಹಾಜರಾಗಲು ಅವಕಾಶ ಇರುವುದಿಲ್ಲ.**

## 8. <u>ಶಿಕ್ಷಕರ ಅರ್ಹತಾ ಪರೀಕ್ಷೆಯ ವಿಷಯ ಮತ್ತು ಸ್ವರೂಪ:</u>

### 8.1 ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯು 2 ಪತ್ರಿಕೆಗಳನ್ನೊಳಗೊಂಡಿದೆ.

ಪತ್ರಿಕೆ-1: 1 ರಿಂದ 5ನೇ ತರಗತಿ ಬೋಧಿಸುವ ಶಿಕ್ಷಕರಿಗಾಗಿ.

ಪತ್ರಿಕೆ-2: 6 ರಿಂದ 8ನೇ ತರಗತಿ ಬೋಧಿಸುವ ಶಿಕ್ಷಕರಿಗಾಗಿ.

**<u>ಸೂಚನೆ</u>: ಅಭ್ಯರ್ಥಿಯು 2 ಹಂತದ (1 ರಿಂದ 5 ಮತ್ತು 6 ರಿಂದ 8) ತರಗತಿಗಳ ಬೋಧನೆಗಾಗಿ ಅರ್ಹತೆ ಪಡೆಯಲು ಅಪೇಕ್ಷಿಸಿದಲ್ಲಿ ಮೇಲಿನ 2 ಪರೀಕ್ಷೆಗಳಲ್ಲಿ ಅಂದರೆ ಪತ್ರಿಕೆ-1 ಮತ್ತು ಪತ್ರಿಕೆ-2ರಲ್ಲಿ ಅರ್ಹತೆ ಪಡೆಯುವುದು ಕಡ್ಡಾಯ.**

**8.2** ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯು 150 ಅಂಕಗಳದ್ದಾಗಿದ್ದು, ಪ್ರತಿ ಪ್ರಶ್ನೆಗೆ ಅಂಕ ಒಟ್ಟು 150 ಬಹು ಆಯ್ಕೆ ಪ್ರಶ್ನೆಗಳನ್ನು (MCQs) ಒಳಗೊಂಡಿರುತ್ತದೆ. ಪ್ರತಿ ಪ್ರಶ್ನೆಗೆ ನಾಲ್ಕು ಆಯ್ಕೆಗಳಿದ್ದು ಒಂದು ಆಯ್ಕೆ ಮಾತ್ರ ಸರಿಯಾಗಿರುತ್ತದೆ. **ಸರಿಯಾದ ಉತ್ತರವನ್ನು ಪ್ರಶ್ನೆಪತ್ರಿಕೆಯೊಂದಿಗೆ ನೀಡಲಾಗುವ OMR ಶೀಟುಗಳಲ್ಲಿ ಕ್ರಮವತ್ತಾಗಿ ಶೇಡ್ ಮಾಡಬೇಕು. ಋಣಾತ್ಮಕ ಮೌಲ್ಯಮಾಪನ** (Negative Evaluation) **ಇರುವುದಿಲ್ಲ.**

## ೮.೩. <u>ಪತ್ರಿಕೆ–1</u> (1 ರಿಂದ 5ನೇ ತರಗತಿ ಬೋಧಿಸುವ ಶಿಕ್ಷಕರಿಗಾಗಿ):

**ಪರೀಕ್ಷಾ ಅವಧಿ: 2 ಗಂಟೆ 30 ನಿಮಿಷ**

| ಕ್ರ.ಸಂ | ವಿಷಯ | ಪ್ರಶ್ನೆಗಳ ಸಂಖ್ಯೆ | ಒಟ್ಟು ಅಂಕಗಳು |
|---|---|---|---|
| 1 | ಭಾಷೆ–1(ಕಡ್ಡಾಯ) | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 2 | ಭಾಷೆ–2(ಕಡ್ಡಾಯ) | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 3 | ಶಿಶು ವಿಕಸನ ಹಾಗೂ ಬೋಧನಾ ಕ್ರಮ (ಕಡ್ಡಾಯ) | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 4 | ಗಣಿತ | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 5 | ಪರಿಸರ ಅಧ್ಯಯನ | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 6 | ಸಮಾಜ ಅಧ್ಯಯನ (ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳ ಬದಲಾಗಿ ಅಂಧ ವಿದ್ಯಾರ್ಥಿಗಳಿಗೆ ಮಾತ್ರ) | 60 ಬಹು ಆಯ್ಕೆ ಪ್ರಶ್ನೆ | 60 ಅಂಕಗಳು |
| | **ಒಟ್ಟು** | **150 ಬಹು ಆಯ್ಕೆ ಪ್ರಶ್ನೆಗಳು** | **150 ಅಂಕಗಳು** |

## ೮.೪. <u>ಪ್ರಶ್ನೆಗಳ ಸ್ವರೂಪ ಮತ್ತು ವ್ಯಾಪ್ತಿ:</u>

1. ಭಾಷೆ–1ಕ್ಕೆ ಸಂಬಂಧಿಸಿದ ಪ್ರಶ್ನೆಗಳು ಬೋಧನಾ ಮಾಧ್ಯಮದ ಭಾಷಾ ಕುಶಲತೆಯನ್ನು ಆಧರಿಸಿರುತ್ತದೆ.
2. ಭಾಷೆ–2ಕ್ಕೆ ಸಂಬಂಧಿಸಿದ ಪ್ರಶ್ನೆಗಳು ಆ ಭಾಷೆಯ ಮೂಲಭೂತ ಅಂಶಗಳು, ಸಂವಹನ ಮತ್ತು ವಿಷಯ ಗ್ರಹಿಕೆಯ ಸಾಮರ್ಥ್ಯವನ್ನು ಆಧರಿಸಿರುತ್ತದೆ.
3. ಶಿಶುವಿಕಸನ ಹಾಗೂ ಬೋಧನಾಕ್ರಮ ವಿಷಯದ ಪ್ರಶ್ನೆಗಳು 6 ರಿಂದ 11ರ ವಯೋಮಾನದ ಮಕ್ಕಳ ಮನೋವಿಜ್ಞಾನ ಹಾಗೂ ಬೋಧನಾ ಮತ್ತು ಕಲಿಕೆಯ ಮೇಲೆ ಕೇಂದ್ರೀಕೃತವಾಗಿರುತ್ತವೆ. ವಿಭಿನ್ನ ಕಲಿಕೆಯ ಹಿನ್ನೆಲೆಯುಳ್ಳ ಮಕ್ಕಳ ಅವಶ್ಯಕತೆಗಳು ಹಾಗೂ ಅವರ ಕಲಿಕೆಯ ಮಟ್ಟವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಶಿಕ್ಷಕರು ತಿಳಿದುಕೊಳ್ಳಬೇಕಾದ ಅಂಶಗಳನ್ನು ಒಳಗೊಂಡಿರುತ್ತದೆ.
4. ಗಣಿತ ಮತ್ತು ಪರಿಸರ ಅಧ್ಯಯನಕ್ಕೆ ಸಂಬಂಧಿಸಿದ ಪ್ರಶ್ನೆಗಳು ಆ ವಿಷಯದ ಮೂಲ ಪರಿಕಲ್ಪನೆಗಳು, ಸಮಸ್ಯೆಯನ್ನು ಬಿಡಿಸುವ ಸಾಮರ್ಥ್ಯ ಮತ್ತು ಭಾಷಾ ಬೋಧನಾ ಶಾಸ್ತ್ರದ ಅರ್ಥೈಸಿಕೊಳ್ಳುವಿಕೆಯನ್ನು ಒಳಗೊಂಡಿರುತ್ತದೆ.
5. **ಪತ್ರಿಕೆ–1ರಲ್ಲಿನ ಪ್ರಶ್ನೆಗಳು ಎನ್.ಸಿ.ಇ.ಆರ್.ಟಿ/ ರಾಜ್ಯ ಪಠ್ಯಕ್ರಮವಾದ 1 ರಿಂದ 8ನೇ ತರಗತಿಗೆ ಸಂಬಂಧಿಸಿದ ಪಠ್ಯವಸ್ತುವನ್ನು ಆಧರಿಸಿರುತ್ತದೆ. ಪ್ರಶ್ನೆಗಳ ಕಠಿಣತೆಯ ಮಟ್ಟ ಪ್ರೌಢ ಹಂತಕ್ಕೆ (ಹತ್ತನೇ ತರಗತಿಯವರೆಗೆ) ಸೀಮಿತವಾಗಿರುತ್ತದೆ.**
6. ಅಂಧ ಅಭ್ಯರ್ಥಿಗಳು (Visually impaired) ಗಣಿತ ಮತ್ತು ಪರಿಸರ ಅಧ್ಯಯನದ ಪ್ರಶ್ನೆಪತ್ರಿಕೆಗೆ ಬದಲಾಗಿ ಸಮಾಜ ಅಧ್ಯಯನ ಪ್ರಶ್ನೆಪತ್ರಿಕೆಯಲ್ಲಿನ 60 ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.

## 8.5. <u>ಪತ್ರಿಕೆ-2</u> (6 ರಿಂದ 8ನೇ ತರಗತಿ ಬೋಧಿಸುವ ಶಿಕ್ಷಕರಿಗಾಗಿ):
**ಪರೀಕ್ಷಾ ಅವಧಿ: 2 ಗಂಟೆ 30 ನಿಮಿಷ**

| ಕ್ರ.ಸಂ | ವಿಷಯ | ಪ್ರಶ್ನೆಗಳ ಸಂಖ್ಯೆ | ಒಟ್ಟು ಅಂಕಗಳು |
|---|---|---|---|
| 1 | ಭಾಷೆ-1(ಕಡ್ಡಾಯ) | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 2 | ಭಾಷೆ-2(ಕಡ್ಡಾಯ) | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 3 | ಶಿಶು ವಿಕಸನ ಹಾಗೂ ಬೋಧನಾ ಕ್ರಮ (ಕಡ್ಡಾಯ) | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 4 | ಗಣಿತ ಮತ್ತು ವಿಜ್ಞಾನ (ಗಣಿತ ಮತ್ತು ವಿಜ್ಞಾನ ಶಿಕ್ಷಕರಿಗಾಗಿ) | 60 ಬಹು ಆಯ್ಕೆ ಪ್ರಶ್ನೆ | 60 ಅಂಕಗಳು |
| 5 | ಸಮಾಜ ಪಾಠಗಳು / ಸಮಾಜ ವಿಜ್ಞಾನ (ಸಮಾಜ ವಿಜ್ಞಾನ ಶಿಕ್ಷಕರಿಗಾಗಿ) | 60 ಬಹು ಆಯ್ಕೆ ಪ್ರಶ್ನೆ | 60 ಅಂಕಗಳು |
| | **ಒಟ್ಟು** | **150 ಬಹು ಆಯ್ಕೆ ಪ್ರಶ್ನೆಗಳು** | **150 ಅಂಕಗಳು** |

## 8.6. <u>ಪ್ರಶ್ನೆಗಳ ಸ್ವರೂಪ ಮತ್ತು ವ್ಯಾಪ್ತಿ:</u>

1. ಭಾಷೆ-1ಕ್ಕೆ ಸಂಬಂಧಿಸಿದ ಪ್ರಶ್ನೆಗಳು ಬೋಧನಾ ಮಾಧ್ಯಮದ ಭಾಷಾ ಕುಶಲತೆಯನ್ನು ಆಧರಿಸಿರುತ್ತದೆ.
2. ಭಾಷೆ-2ಕ್ಕೆ ಸಂಬಂಧಿಸಿದ ಪ್ರಶ್ನೆಗಳು ಆ ಭಾಷೆಯ ಮೂಲಭೂತ ಅಂಶಗಳು, ಸಂವಹನ ಮತ್ತು ವಿಷಯ ಗ್ರಹಿಕೆಯ ಸಾಮರ್ಥ್ಯವನ್ನು ಆಧರಿಸಿರುತ್ತದೆ.
3. ಶಿಶು ವಿಕಸನ ಹಾಗೂ ಬೋಧನಾಕ್ರಮ ವಿಷಯದ ಪ್ರಶ್ನೆಗಳು 11 ರಿಂದ 14ರ ವಯೋಮಾನದ ಮಕ್ಕಳ ಮನೋವಿಜ್ಞಾನ ಹಾಗೂ ಬೋಧನಾ ಮತ್ತು ಕಲಿಕೆಯ ಮೇಲೆ ಕೇಂದ್ರೀಕೃತವಾಗಿರುತ್ತದೆ.
4. ಗಣಿತ, ವಿಜ್ಞಾನ ಮತ್ತು ಸಮಾಜ ಪಾಠಗಳು/ ಸಮಾಜ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳು ಆ ವಿಷಯದ ಮೂಲ ಪರಿಕಲ್ಪನೆಗಳು, ಸಮಸ್ಯೆಯನ್ನು ಬಿಡಿಸುವ ಸಾಮರ್ಥ್ಯ ಮತ್ತು ಭಾಷಾ ಬೋಧನಾ ಶಾಸ್ತ್ರದ ಅರ್ಥೈಸಿಕೊಳ್ಳುವಿಕೆಯನ್ನು ಒಳಗೊಂಡಿರುತ್ತದೆ. ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಪ್ರತಿ ವಿಷಯದಲ್ಲಿ 30 ಪ್ರಶ್ನೆಗಳಿರುತ್ತವೆ.
5. ವಿಭಿನ್ನ ಕಲಿಕೆಯ ಹಿನ್ನೆಲೆಯುಳ್ಳ ಮಕ್ಕಳ ಅವಶ್ಯಕತೆಗಳು ಹಾಗೂ ಅವರ ಕಲಿಕೆಯ ಮಟ್ಟವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಶಿಕ್ಷಕರು ತಿಳಿದುಕೊಳ್ಳಬೇಕಾದ ಅಂಶಗಳನ್ನು ಒಳಗೊಂಡಿರುತ್ತದೆ.
6. **ಪತ್ರಿಕೆ-2ರಲ್ಲಿನ ಎಲ್ಲಾ ಪ್ರಶ್ನೆಗಳು ಎನ್.ಸಿ.ಇ.ಆರ್.ಟಿ./ ರಾಜ್ಯದ 6 ರಿಂದ 10ನೇ ತರಗತಿಗೆ ಸಂಬಂಧಿಸಿದ ಪಠ್ಯವಸ್ತುವನ್ನು ಆಧರಿಸಿದ್ದು, ಪ್ರಶ್ನೆಗಳ ಕಠಿಣತೆಯ ಮಟ್ಟ ಹಿರಿಯ ಪ್ರೌಢ (PUC)/+2 ಹಂತಕ್ಕೆ ಸೀಮಿತವಾಗಿರುತ್ತದೆ.**

## 9. <u>ಪ್ರಶ್ನೆ ಪತ್ರಿಕೆಯ ಮಾಧ್ಯಮ:</u>

ಭಾಷಾ ವಿಷಯಗಳ ಹೊರತಾಗಿ ಉಳಿದ ಎಲ್ಲಾ ವಿಷಯಗಳ ಪ್ರಶ್ನೆಗಳನ್ನು **ಕನ್ನಡ, ಇಂಗ್ಲಿಷ್, ಉರ್ದು, ತಮಿಳು, ತೆಲುಗು, ಹಿಂದಿ ಮತ್ತು ಮರಾಠಿ** ಮಾಧ್ಯಮಗಳಲ್ಲಿ ಮುದ್ರಿಸಲಾಗಿರುತ್ತದೆ. **ಆದರೆ ಅಭ್ಯರ್ಥಿಯು ಅರ್ಜಿ ಸಲ್ಲಿಸುವಾಗ ಆಯ್ಕೆ ಮಾಡಿಕೊಂಡ ಮಾಧ್ಯಮದಲ್ಲಿಯೇ ಉತ್ತರಿಸಬೇಕು.**

## 10. ಅರ್ಹತಾ ಅಂಕಗಳು ಹಾಗೂ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯ ಪ್ರಮಾಣ ಪತ್ರ:

**10.1** ಅಧಿಸೂಚನೆಯಲ್ಲಿ ತಿಳಿಸಿರುವಂತೆ ಸಾಮಾನ್ಯ ವರ್ಗ/ 2ಎ/ 2ಬಿ/ 3ಎ/ 3ಬಿ ಗುಂಪುಗಳಿಗೆ ಸೇರಿರುವ ಅಭ್ಯರ್ಥಿಗಳು ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಟ ಶೇ. 60% ರಷ್ಟು ಅರ್ಹತಾ ಅಂಕಗಳನ್ನು ಪಡೆಯಬೇಕು.

ಪ.ಜಾತಿ/ಪ.ವರ್ಗ/ಪ್ರವರ್ಗ-1 ಹಾಗೂ ವಿಶೇಷ ಚೇತನ/ದಿವ್ಯಾಂಗ ಅಭ್ಯರ್ಥಿಗಳು ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಟ ಶೇ. 55% ರಷ್ಟು ಅರ್ಹತಾ ಅಂಕಗಳನ್ನು ಪಡೆಯಬೇಕು.

**10.2** ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಅರ್ಹತಾ ಅಂಕಗಳನ್ನು ಗಳಿಸಿದ ಅಭ್ಯರ್ಥಿಗಳಿಗೆ ಗಣಕೀಕೃತ ಅಂಕಪಟ್ಟಿ ವಿತರಿಸಲಾಗುವುದು. ಕೇಂದ್ರೀಕೃತ ದಾಖಲಾತಿ ಘಟಕದಿಂದ ಈ ಸಂಬಂಧ ಪ್ರತ್ಯೇಕವಾಗಿ ಮುದ್ರಿತ ಅಂಕಪಟ್ಟಿಯನ್ನು ನೀಡಲಾಗುವುದಿಲ್ಲ. ಬದಲಾಗಿ ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ನೀಡಲಾದ ಲಿಂಕ್ ಮೂಲಕ ಸುರಕ್ಷತಾ ಕೋಡ್ ಹೊಂದಿರುವ ಗಣಕೀಕೃತ ಪ್ರಮಾಣ ಪತ್ರ ಪ್ರತಿಯನ್ನು ಪಡೆದುಕೊಳ್ಳಬಹುದಾಗಿದೆ. ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿರುವಂತೆ ನೋಂದಣಿ/ ಅರ್ಜಿಸಂಖ್ಯೆ ಮತ್ತು ಅಭ್ಯರ್ಥಿಯ ಜನ್ಮದಿನಾಂಕವನ್ನು ನಮೂದಿಸಿ ಗಣಕೀಕೃತ ಪ್ರಮಾಣ ಪತ್ರ ಪಡೆದುಕೊಳ್ಳಬಹುದು.

**10.3** ಫಲಿತಾಂಶ ಪ್ರಕಟವಾದ ನಾಲ್ಕು ವಾರಗಳ ಒಳಗಾಗಿ ಪ್ರಮಾಣ ಪತ್ರವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ Upload ಮಾಡಲಾಗುವುದು. ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ನೀಡಲಾದ ಲಿಂಕ್ ಮೂಲಕ ತಮ್ಮ ಪ್ರಮಾಣ ಪತ್ರವನ್ನು ಪಡೆದುಕೊಳ್ಳಬಹುದಾಗಿದ್ದು, ಈ ಸಂಬಂಧ ಇಲಾಖಾ ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡಲಾಗುವುದು.

**11. ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅರ್ಹತೆಯು ಶಿಕ್ಷಕರ ನೇಮಕಾತಿಗಾಗಿ ಹೊಂದಿರಬೇಕಾದ ಕನಿಷ್ಠ ಅರ್ಹತೆಯೇ ಹೊರತು, ಇದು ಶಿಕ್ಷಕರ ನೇಮಕಾತಿ ಪರೀಕ್ಷೆ ಅಲ್ಲ.**

**12.** ಟಿ.ಇ.ಟಿ ಪರೀಕ್ಷಾ ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆಗಳಿಗೆ ನೀಡಲಾದ ಬಹುಆಯ್ಕೆ ಉತ್ತರಗಳಲ್ಲಿ ನೀಡಿದ ನಾಲ್ಕೂ ಉತ್ತರಗಳೂ ತಪ್ಪಿದ್ದಲ್ಲಿ ಅಥವಾ ನೀಡಲಾದ ಪ್ರಶ್ನೆಯಲ್ಲಿ ಮುದ್ರಣ ದೋಷವಿದ್ದಲ್ಲಿ/ತಪ್ಪಿದ್ದಲ್ಲಿ ವಿಷಯ ತಜ್ಞರಿಂದ ಪರಿಶೀಲನೆ ಮಾಡಿಸಲಾಗುವುದು. ತಪ್ಪಾದ ಪ್ರಶ್ನೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸದೇ ಅಂತಹ ಪ್ರಶ್ನೆಯನ್ನು Delete ಮಾಡಲಾಗುವುದು ಹಾಗೂ ಅಂತಹ ಪ್ರಶ್ನೆಗೆ ಯಾವುದೇ ಕೃಪಾಂಕ ನೀಡಲಾಗುವುದಿಲ್ಲ. ಈ ರೀತಿ Delete ಮಾಡಲಾದ ಪ್ರಶ್ನೆಗಳನ್ನು ಹೊರತುಪಡಿಸಿ, ಉಳಿದ ಒಟ್ಟು ಪ್ರಶ್ನೆಗಳ ಸಂಖ್ಯೆಯನ್ನಾಧರಿಸಿ ಶೇಕಡವಾರು ಲೆಕ್ಕಹಾಕಿ ಅರ್ಹತೆಯನ್ನು ನಿರ್ಧರಿಸಲಾಗುವುದು.

**12.1** ಪರೀಕ್ಷೆಯ ನಂತರ ಇಲಾಖಾ ವೆಬ್‌ಸೈಟ್‌ನಲ್ಲಿ ಕೀ-ಉತ್ತರಗಳನ್ನು ಪ್ರಕಟಿಸಿ, ಆಕ್ಷೇಪಣೆಗಳಿದ್ದಲ್ಲಿ ಆನ್‌ಲೈನ್ ಮೂಲಕ ಸೂಕ್ತ ದಾಖಲೆಗಳೊಂದಿಗೆ, ಆಕ್ಷೇಪಣೆ ಸಲ್ಲಿಸಲು ನಾಲ್ಕು ದಿನಗಳ ಕಾಲಾವಕಾಶ ನೀಡಲಾಗುವುದು. ಸ್ವೀಕರಿಸಲಾದ ಆಕ್ಷೇಪಣೆಗಳನ್ನು ತಜ್ಞರ ಸಮಿತಿಯು ಪರಿಶೀಲಿಸಿ ಉತ್ತರವನ್ನು ಅಂತಿಮಗೊಳಿಸುತ್ತದೆ. ಇದನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಈ ಉತ್ತರಗಳೇ ಅಂತಿಮವಾಗಿದ್ದು ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.

**13. ಅನ್ವಯತೆ:**

ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯ ಪ್ರಮಾಣ ಪತ್ರವು ಕರ್ನಾಟಕ ರಾಜ್ಯ ಸರ್ಕಾರದ ಇಲಾಖೆಯ ಸರ್ಕಾರಿ/ಸ್ಥಳೀಯ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ಶಾಲೆಗಳು, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಿಗೆ ಅನ್ವಯಿಸುತ್ತದೆ.

**14. ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯ (KARTET) ಪ್ರಮಾಣ ಪತ್ರದ ಮಾನ್ಯತೆ:**

1. **ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯ ಪ್ರಮಾಣ ಪತ್ರವು ಜೀವಿತಾವಧಿಯವರೆಗೆ** ಮಾನ್ಯತೆಯನ್ನು ಹೊಂದಿರುತ್ತದೆ.
2. ಅಭ್ಯರ್ಥಿಗಳು ಎಷ್ಟು ಬಾರಿಯಾದರೂ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಪರೀಕ್ಷೆಯಲ್ಲಿ ಅರ್ಹತೆಯನ್ನು ಪಡೆದಿರುವ ಅಭ್ಯರ್ಥಿಗಳು ಸಹ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸುವ ಸಲುವಾಗಿ ಪುನಃ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

**15. ವಿಶೇಷ ಚೇತನ/ ದಿವ್ಯಾಂಗ ಅಭ್ಯರ್ಥಿಗಳಿಗೆ ಹೆಚ್ಚುವರಿ ಸಮಯ ಹಾಗೂ ಪರೀಕ್ಷಾ ಸಹಾಯಕರ (ಸ್ಕ್ರೈಬ್) ಸೌಲಭ್ಯ:**

1. **ಭಾರತ ಸರ್ಕಾರ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಮತ್ತು ಅಂಗವೈಕಲ್ಯ ಇಲಾಖೆಯ** OMF. No.16-110/2003-DD.III Dated 26-02-2013 ರ **ಮಾರ್ಗಸೂಚಿಯನ್ವಯ** KARTET ಪರೀಕ್ಷೆ ನಡೆಸುವ ಸಲುವಾಗಿ ಕೆಳಗಿನ ನಿಯಮಗಳು ವಿಶೇಷಚೇತನ ಅಭ್ಯರ್ಥಿಗಳಿಗೆ ಅನ್ವಯಿಸುತ್ತವೆ.
2. ಪರೀಕ್ಷಾ ಲಿಪಿಕಾರರನ್ನು ಬಳಸಿಕೊಂಡು KARTET-2025 ರ ಪರೀಕ್ಷೆ ಬರೆಯುತ್ತಿರುವ ವಿಶೇಷ ಅಗತ್ಯತೆಯುಳ್ಳ ಅಭ್ಯರ್ಥಿಗಳಿಗೆ ಪ್ರತಿ ಪತ್ರಿಕೆಗೆ 50 ನಿಮಿಷಗಳ(ಪ್ರತಿ ಘಂಟೆಗೆ 20 ನಿಮಿಷದಂತೆ) ಹೆಚ್ಚಿನ ಕಾಲಾವಕಾಶವನ್ನು ನೀಡಲಾಗುವುದು. ಪರೀಕ್ಷಾ ಸಹಾಯಕರನ್ನು ಬಳಸಿಕೊಳ್ಳದ ಇತರೆ ವಿಶೇಷ ಅಗತ್ಯತೆಯುಳ್ಳ ಅಭ್ಯರ್ಥಿಗಳಿಗೂ ಸಹ ಪ್ರತಿ ಪತ್ರಿಕೆಗೆ 50 ನಿಮಿಷಗಳ(ಪ್ರತಿ ಘಂಟೆಗೆ 20 ನಿಮಿಷದಂತೆ) ಹೆಚ್ಚಿನ ಕಾಲಾವಕಾಶದ ಸೌಲಭ್ಯವನ್ನು ನೀಡಲಾಗುವುದು. ಈ ಬಗ್ಗೆ ಮುಂಚಿತವಾಗಿ ಸೂಕ್ತ ದಾಖಲೆಗಳೊಂದಿಗೆ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಅರ್ಜಿ ಸಲ್ಲಿಸಬೇಕು.
3. ವಿಶೇಷ ಅಗತ್ಯತೆಯುಳ್ಳ ಅಭ್ಯರ್ಥಿಗಳು ಇಚ್ಛಿಸಿದಲ್ಲಿ ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಪ್ರಮಾಣ ಪತ್ರವನ್ನು ಸಲ್ಲಿಸಿ ಪರೀಕ್ಷಾ ಸಹಾಯಕರನ್ನು ಬಳಸಿಕೊಳ್ಳಲು ಅವಕಾಶವಿರುತ್ತದೆ.
4. ಅಭ್ಯರ್ಥಿಗಳು ತಮ್ಮ ಅಗತ್ಯತೆಗನುಗುಣವಾಗಿ ಪರೀಕ್ಷಾ ಸಹಾಯಕರನ್ನು ತಾವೇ ನೇಮಿಸಿಕೊಳ್ಳುವುದು. ಕೊನೆಯ ಹಂತದ ವಿಳಂಬ ತಪ್ಪಿಸುವ ಸಲುವಾಗಿ ಪರೀಕ್ಷಾ ದಿನಾಂಕಕ್ಕಿಂತ ಮುಂಚಿತವಾಗಿ ಸಂಬಂಧಪಟ್ಟ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಪರೀಕ್ಷಾ ಸಹಾಯಕರ ವಿವರದೊಂದಿಗೆ ಮನವಿ ಸಲ್ಲಿಸಿ ಅನುಮೋದನೆ ಪಡೆದುಕೊಳ್ಳುವುದು.
5. **ಲಿಪಿಕಾರನು/ಳು(ಸ್ಕ್ರೈಬ್) ಹೊಂದಿರುವ ವಿದ್ಯಾರ್ಹತೆಯು ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಗಿಂತ ಕಡಿಮೆ ಇರತಕ್ಕದ್ದಲ್ಲ. ಆದರೆ ಅಂತಹ ಲಿಪಿಕಾರನು/ಳು(ಸ್ಕ್ರೈಬ್) ಹೊಂದಿರುವ ವಿದ್ಯಾರ್ಹತೆಯು ಸದರಿ ಅಭ್ಯರ್ಥಿಯು ಹೊಂದಿರುವ ವಿದ್ಯಾರ್ಹತೆಗಿಂತ ಒಂದು ಹಂತ ಕೆಳಗಿರಬೇಕು. ಇದಕ್ಕಾಗಿ ಅಭ್ಯರ್ಥಿಯು ಲಿಪಿಕಾರನ/ಳ ವಿವರಗಳನ್ನು ಮುಂಚಿತವಾಗಿ ಪರೀಕ್ಷಾ ಕೇಂದ್ರದ ಮುಖ್ಯಅಧೀಕ್ಷಕರಿಗೆ ಸಲ್ಲಿಸತಕ್ಕದ್ದು. ಪರೀಕ್ಷಾ ಮೇಲ್ವಿಚಾರಣಾ ವ್ಯವಸ್ಥೆಯನ್ನು ಬಲಗೊಳಿಸಿ ಅಭ್ಯರ್ಥಿಗಳಿಗೆ**

**ನೀಡಲಾಗಿರುವ ಪರೀಕ್ಷಾ ಸಹಾಯಕರು ಯಾವುದೇ ರೀತಿಯ ಪರೀಕ್ಷಾ ಅವ್ಯವಹಾರದಲ್ಲಿ (ನಕಲು ಅಥವಾ ಇನ್ನಾವುದೇ ರೀತಿಯ ಅನಪೇಕ್ಷಿತ ವರ್ತನೆ) ತೊಡಗುವುದನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಿದೆ.**

6. ಲಿಪಿಕಾರನು/ಳು ಹೊಂದಿರುವ ಗರಿಷ್ಠ ವಿದ್ಯಾರ್ಹತೆ ಕುರಿತಂತೆ ಸ್ವಯಂ ದೃಡೀಕರಣ ಪತ್ರವನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಸಲ್ಲಿಸಬೇಕು. ಒಂದು ವೇಳೆ ನೀಡಲಾದ ಮಾಹಿತಿಯು ತಪ್ಪೆಂದು ಕಂಡುಬಂದಲ್ಲಿ ಅದನ್ನು ಪರೀಕ್ಷಾ ಅವ್ಯವಹಾರ/ ದುರ್ನಡತೆ ಎಂದು ಪರಿಗಣಿಸಲಾಗುವುದು.
7. ವಿಶೇಷ ಅಗತ್ಯತೆಯುಳ್ಳ ಅಭ್ಯರ್ಥಿಗಳಿಗೆ ನೆಲಮಹಡಿಯಲ್ಲಿ ಪರೀಕ್ಷೆ ಬರೆಯಲು ಸೂಕ್ತವಾದ ಸ್ಥಳಾವಕಾಶವನ್ನು ಕಲ್ಪಿಸಲಾಗುವುದು.

## 16. ದಾಖಲೆಗಳ ಸಂರಕ್ಷಣೆ:

KARTET -2025 ರ ದಾಖಲೆಗಳನ್ನು ಹಾಗೂ ಅಭ್ಯರ್ಥಿಗಳ ಓ.ಎಂ.ಆರ್. ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಫಲಿತಾಂಶ ಪ್ರಕಟಣೆ ದಿನಾಂಕದ ನಂತರ **ಆರು ತಿಂಗಳ ಕಾಲ** ಸಂರಕ್ಷಿಸಿ ನಿರ್ವಹಿಸಲಾಗುವುದು.

## 17. ಮರುಎಣಿಕೆ/ ಮರುಮೌಲ್ಯಮಾಪನ:

**ಪರೀಕ್ಷೆಯು ಬಹುಆಯ್ಕೆ ಹಾಗೂ OMR ಉತ್ತರ ಪತ್ರಿಕೆಯ ಮೂಲಕ ನಡೆಯುವುದರಿಂದ ಹಾಗೂ OMR ಉತ್ತರ ಪತ್ರಿಕೆಗಳನ್ನು ಗಣಕೀಕೃತ ಮೌಲ್ಯಮಾಪನ ಮಾಡುವುದರಿಂದ ಯಾವುದೇ ಮರುಎಣಿಕೆ, ಮರುಮೌಲ್ಯಮಾಪನಕ್ಕೆ ಅವಕಾಶ ಇರುವುದಿಲ್ಲ ಹಾಗೂ ಈ ಕುರಿತಂತೆ ಯಾವುದೇ ರೀತಿಯ ಮನವಿಯನ್ನು ಪರಿಗಣಿಸಲಾಗುವುದಿಲ್ಲ.**

## 18. ಕಾನೂನಿನ ಪರಿಮಿತಿ:

KARTET-2025 ರ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ವ್ಯಾಜ್ಯಗಳು ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಕೇಂದ್ರೀಕೃತ ದಾಖಲಾತಿ ಘಟಕದ ಸಹನಿರ್ದೇಶಕರು ಕಾನೂನಾತ್ಮಕ ವ್ಯಕ್ತಿಯಾಗಿರುತ್ತಾರೆ.

## 19. ಪ್ರಮುಖ ಸೂಚನೆಗಳು:

1. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಮಾತ್ರ ಅರ್ಜಿಗಳನ್ನು ಸಲ್ಲಿಸಬೇಕು.
2. ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಸಹ ಆನ್‌ಲೈನ್ ಮೂಲಕವೇ ಪಡೆಯತಕ್ಕದ್ದು.
3. ಅಭ್ಯರ್ಥಿಯು ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಹಾಜರಾದ ಮಾತ್ರಕ್ಕೆ ಅರ್ಹತೆಯನ್ನು ಪಡೆಯುವುದಿಲ್ಲ.
4. ಅರ್ಜಿಗಳನ್ನು ದಿನಾಂಕ: **09/11/2025ರೊಳ**ಗೆ ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಅಂತಿಮ ದಿನಾಂಕದ ನಂತರ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಅಂಚೆ ಅಥವಾ ಇನ್ಯಾವುದೇ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
5. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಯು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸುವ ಮೀಸಲಾತಿ, ಜನ್ಮ ದಿನಾಂಕ, ವಿದ್ಯಾರ್ಹತೆ ಹಾಗೂ ವಯೋಮಿತಿ ಸಡಿಲಿಕೆ ಇತ್ಯಾದಿಗಳಿಗೆ ಸಲ್ಲಿಸಿರುವ ಸಂಬಂಧಿತ ವಿವರಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು.
6. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ಭರ್ತಿ ಮಾಡಿರುವ ಮಾಹಿತಿಗಳ ಆಧಾರದ ಮೇಲೆ ಅವರಿಗೆ ಅರ್ಹತಾ ಪರೀಕ್ಷೆ ಬರೆಯಲು ಪ್ರವೇಶ ಪತ್ರಗಳನ್ನು ನೀಡಲಾಗುತ್ತದೆ. ಆದ್ದರಿಂದ ನಿಗದಿಪಡಿಸಿರುವ

ವಿದ್ಯಾರ್ಹತೆ, ನಿಗದಿಪಡಿಸಲಾದ ಶೈಕ್ಷಣಿಕ ಅರ್ಹತೆಯ ಅಂಕಗಳ ಮಾಹಿತಿ, ಮೀಸಲಾತಿ, ಜನ್ಮದಿನಾಂಕ ಇತ್ಯಾದಿಗಳಿಗೆ ಅನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಪೂರ್ಣ ಮಾಹಿತಿ ನೀಡದ ಅಥವಾ ತಪ್ಪು ಮಾಹಿತಿ ನೀಡಿರುವುದು ಕಂಡುಬಂದಲ್ಲಿ ಅಂತಹವರ ಫಲಿತಾಂಶವನ್ನು ರದ್ದುಪಡಿಸಲಾಗುವುದು ಹಾಗೂ ಕಾನೂನು ಕ್ರಮ ಜರುಗಿಸಲಾಗುವುದು.

7. ಆನ್‌ಲೈನ್ ಅರ್ಜಿಯಲ್ಲಿ ಸಲ್ಲಿಸಿದ ತಪ್ಪು ಮಾಹಿತಿಯ ಆಧಾರದ ಮೇಲೆ ಅಭ್ಯರ್ಥಿಯು ಅರ್ಹತೆ ಹೊಂದಿದಲ್ಲಿ ಅಥವಾ ಪರೀಕ್ಷೆಯಲ್ಲಿ ಪರೀಕ್ಷಾ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಅಭ್ಯರ್ಥಿಯ ಅರ್ಹತಾ ಪ್ರಮಾಣ ಪತ್ರವನ್ನು ರದ್ದುಗೊಳಿಸುವ ಅಧಿಕಾರವನ್ನು ಸಹನಿರ್ದೇಶಕರು, ಕೇಂದ್ರೀಕೃತ ದಾಖಲಾತಿ ಘಟಕ. ಇವರು ಕಾಯ್ದಿರಿಸಿಕೊಂಡಿರುತ್ತಾರೆ.
8. ಕರ್ನಾಟಕ ಅರ್ಹತಾ ಪರೀಕ್ಷೆಯು ಸರ್ಕಾರ/ ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸುವ ನಿಯಮಗಳು, ಆದೇಶಗಳು ಮತ್ತು ತಿದ್ದುಪಡಿಗೆ ಒಳಪಟ್ಟಿರುತ್ತದೆ.
9. ಅಭ್ಯರ್ಥಿಗಳು ಸಲ್ಲಿಸಿದ ಆನ್‌ಲೈನ್ ಅರ್ಜಿಯ ಪ್ರತಿ, ಪ್ರವೇಶ ಪತ್ರ, ಶುಲ್ಕ ಪಾವತಿಸಿದ ಚಲನ್ ಪ್ರತಿ ಹಾಗೂ ಇತರೆ ದಾಖಲೆಗಳನ್ನು ಸದರಿ ಶಿಕ್ಷಕರ ಅರ್ಹತಾ ಪರೀಕ್ಷಾ ಪ್ರಕ್ರಿಯೆ ಮುಗಿಯುವ ತನಕ ಸುರಕ್ಷಿತವಾಗಿ ಇಟ್ಟುಕೊಳ್ಳತಕ್ಕದ್ದು.

## 20. ದುರ್ನಡತೆ:

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತನೆ ಎಸಗಿದ ಅಥವಾ ಪರೀಕ್ಷಾ ನಿಯಮಗಳನ್ನು ಅಥವಾ ಪರೀಕ್ಷಾ ಗೌಪ್ಯತೆಯನ್ನು ಉಲ್ಲಂಘಿಸಿದ ಬಗ್ಗೆ ತಪ್ಪಿತಸ್ಥನೆಂದು ಕಂಡುಬಂದಲ್ಲಿ ಅಥವಾ ಕೇಂದ್ರೀಕೃತ ದಾಖಲಾತಿ ಘಟಕದಿಂದ ನೀಡಲಾದ ಯಾವುದೇ ಸೂಚನೆಗಳನ್ನು ಉಲ್ಲಂಘಿಸುತ್ತಿರುವನೆಂದು ಅಥವಾ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡುಬಂದಲ್ಲಿ ಅಭ್ಯರ್ಥಿಯು ಅಂತಹ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಕೇಂದ್ರೀಕೃತ ದಾಖಲಾತಿ ಘಟಕವು ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ ಅನರ್ಹನಾಗುತ್ತಾನೆ/ಳೆ.

21. ಅರ್ಹತೆ ಪಡೆದ ಅಭ್ಯರ್ಥಿಗಳ ಪ್ರಮಾಣ ಪತ್ರಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಲಭ್ಯಗೊಳಿಸಿದ ನಂತರ ಅಭ್ಯರ್ಥಿಗಳು ತಮ್ಮ ಮನವಿ/ ಆಕ್ಷೇಪಣೆ ಸಲ್ಲಿಸುವಾಗ ಮೂಲ ಅರ್ಜಿಯಲ್ಲಿ ದಾಖಲಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಮಾತ್ರ ಸಲ್ಲಿಸಬಹುದು. ಅರ್ಜಿಯಲ್ಲಿ ನಮೂದಿಸಲು ಬಿಟ್ಟುಹೋಗಿದ್ದ ಯಾವುದೇ ಮಾಹಿತಿಯನ್ನು ಹೊಸದಾಗಿ ದಾಖಲಿಸಲು ಅವಕಾಶವಿರುವುದಿಲ್ಲ. ಅಂತಹ ಆಕ್ಷೇಪಣೆ ಮತ್ತು ಲಗತ್ತುಗಳನ್ನು ಪರಿಗಣಿಸಲಾಗುವುದಿಲ್ಲ.

## 22. ಅಭ್ಯರ್ಥಿಗಳಿಗೆ ವಿಶೇಷ ಸೂಚನೆ:

1. ಪರೀಕ್ಷೆ ಬರೆಯಲು ಆರಂಭಿಸುವ ಮುನ್ನ ಪೂರ್ವಮುದ್ರಿತ ಓ.ಎಂ.ಆರ್ ಉತ್ತರ ಪತ್ರಿಕೆಯನ್ನು ಸರಿಯಾಗಿ ಪರಿಶೀಲಿಸಿಕೊಂಡು, ತಮ್ಮದೇ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು.

2. ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ಪ್ರತಿ ಪ್ರಶ್ನೆಗೆ ಆಯ್ಕೆ ಮಾಡಿರುವ ಉತ್ತರವನ್ನು ಗುರುತಿಸಲು ನೀಡಲಾಗಿರುವ ನಾಲ್ಕು ವೃತ್ತಗಳ ಪೈಕಿ ಆಯ್ಕೆಯಾದ ವೃತ್ತವನ್ನು ನೀಲಿ/ಕಪ್ಪು ಶಾಯಿಯ ಬಾಲ್‌ಪಾಯಿಂಟ್ ಪೆನ್ ಮಾತ್ರ ಉಪಯೋಗಿಸಿ ಪೂರ್ಣವಾಗಿ ಶೇಡ್ ಮಾಡುವುದು.

3. **ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ, ಉತ್ತರವನ್ನು ಶೇಡ್ ಮಾಡಿದ ಮೇಲೆ ಅದನ್ನು ತಿದ್ದುಪಡಿ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ.**
4. **ಶೇಕಡಾ 30 ಕ್ಕಿಂತ ಕಡಿಮೆ ಶೇಡ್ ಆದ ವೃತ್ತದ ಉತ್ತರವನ್ನು ಗಣಕಯಂತ್ರವು ಮೌಲ್ಯಮಾಪನಕ್ಕೆ ಪರಿಗಣಿಸದಿರುವುದರಿಂದ, ಆಯ್ಕೆ ಮಾಡಿದ ಉತ್ತರದ ವೃತ್ತವನ್ನು ಪೂರ್ಣವಾಗಿ ಶೇಡ್ ಮಾಡಬೇಕು.**
5. ಓ.ಎಂ.ಆರ್ ಉತ್ತರ ಪತ್ರಿಕೆಗಳ ಮಾಲ್ಯಮಾಪನವು ಗಣಕೀಕೃತವಾಗಿರುತ್ತದೆ ಹಾಗೂ ಋಣಾತ್ಮಕ ಮೌಲ್ಯಮಾಪನ (Negative Evaluation) ಇರುವುದಿಲ್ಲ. ಗಣಕೀಕೃತ ಮೌಲ್ಯಮಾಪನ ಆಗಿರುವುದರಿಂದ ಈ ಸಂಬಂಧ ಓ.ಎಂ.ಆರ್ ಉತ್ತರ ಪತ್ರಿಕೆಗಳ ಛಾಯಾ ಪ್ರತಿ (Photo Copy), ಮರುಮೌಲ್ಯಮಾಪನ (Re-evaluation) ಹಾಗೂ ಮರುಎಣಿಕೆ (Recount)ಗೆ ಅವಕಾಶವಿರುವುದಿಲ್ಲ ಹಾಗೂ ಈ ಕುರಿತಂತೆ ಯಾವುದೇ ಅರ್ಜಿ/ ಮನವಿಯನ್ನು ಪರಿಗಣಿಸಲಾಗುವುದಿಲ್ಲ.
6. **ಅರ್ಜಿ ಸಲ್ಲಿಸುವಾಗ ಆಯ್ಕೆ ಮಾಡಿಕೊಂಡ ವಿಷಯ ಹಾಗೂ ಮಾಧ್ಯಮದಲ್ಲಿಯೇ ಉತ್ತರಿಸಬೇಕು. ಯಾವುದೇ ಕಾರಣಕ್ಕೂ ವಿಷಯ ಹಾಗೂ ಮಾಧ್ಯಮದ ಬದಲಾವಣೆಗೆ ಅವಕಾಶ ಇರುವುದಿಲ್ಲ.**
7. ಪ್ರವೇಶ ಪತ್ರವಿಲ್ಲದೆ ಅಭ್ಯರ್ಥಿಗಳನ್ನು ಪರೀಕ್ಷಾ ಕೊಠಡಿಗೆ ಅನುಮತಿಸಲಾಗುವುದಿಲ್ಲ.
8. ಪತ್ರಿಕೆ-1 9.15 AM ಹಾಗೂ ಪತ್ರಿಕೆ-2 1.45PM ನಂತರ ಪರೀಕ್ಷಾ ಕೊಠಡಿಗೆ ಪ್ರವೇಶಿಸಲು ಅವಕಾಶ ನೀಡಲಾಗುವುದಿಲ್ಲ.
9. ಅಭ್ಯರ್ಥಿಗಳು Whitener, Eraser, Sharpner, Blade, ಮುದ್ರಿತ ಅಥವಾ ಲಿಖಿತ ಹಾಳೆಗಳು, ಮೊಬೈಲ್ ಫೋನ್, ಕ್ಯಾಲ್ಕುಲೇಟರ್, ಎಲೆಕ್ಟ್ರಾನಿಕ್ ಕೈಗಡಿಯಾರ ಅಥವಾ ಯಾವುದೇ ಎಲೆಕ್ಟ್ರಾನಿಕ್ ಸಾಧನಗಳನ್ನು ಹಾಗೂ ಹರಿತವಾದ ವಸ್ತುಗಳನ್ನು ಪರೀಕ್ಷಾ ಕೊಠಡಿಗೆ ತೆಗೆದುಕೊಂಡು ಹೋಗುವುದನ್ನು ಹಾಗೂ ಅವುಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
10. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಗೆ ನೀರಿನ ಬಾಟಲ್‌ಗಳನ್ನು ತೆಗೆದುಕೊಂಡು ಹೋಗಲು ಅವಕಾಶವಿರುವುದಿಲ್ಲ.
11. ಪರೀಕ್ಷಾ ಕೊಠಡಿಯಲ್ಲಿ ಅಭ್ಯರ್ಥಿಗಳು ಒಂದು ವೇಳೆ ನಿಷೇಧಿತ ವಸ್ತುಗಳನ್ನು ಬಳಸಿರುವುದು ಕಂಡುಬಂದಲ್ಲಿ ದುರ್ನಡತೆ ಎಂದು ಪರಿಗಣಿಸಿ ಅವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲಾಗುವುದು.
12. ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಕೊಠಡಿ ಮೇಲ್ವಿಚಾರಕರು ಹಾಗೂ ಇತರೆ ಸಿಬ್ಬಂದಿಯವರು ಅನುಸರಿಸಬೇಕಾದ ಕರ್ತವ್ಯಗಳು ಹಾಗೂ ಜವಾಬ್ದಾರಿಗಳ ಬಗ್ಗೆ ಪ್ರತ್ಯೇಕ ಪರೀಕ್ಷಾ ಮಾರ್ಗಸೂಚಿ ಪುಸ್ತಿಕೆಯಲ್ಲಿ ವಿವರವಾಗಿ ತಿಳಿಸಲಾಗುವುದು.

## 23. KARTET-2025 ರಲ್ಲಿನ ಪ್ರಮುಖ ಅಂಶಗಳು

| | | |
|---|---|---|
| 1 | ಆನ್ ಲೈನ್ ಅರ್ಜಿಯನ್ನು https://schooleducation.karnataka.gov.in ಮೂಲಕ ಸಲ್ಲಿಸುವುದು | 23/10/2025 ರಿಂದ 09/11/2025 |
| 2 | ಶುಲ್ಕ ಪಾವತಿಸಲು ಕೊನೆಯ ದಿನಾಂಕ (ಚಲನ್ ಆದಲ್ಲಿ) | 10/11/2025 |
| 3 | ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ | 01/12/2025 ರಿಂದ 07/12/2025 |
| 4 | ಪರೀಕ್ಷಾ ದಿನಾಂಕ | 07/12/2025 **ಭಾನುವಾರ** |
| 5 | ಪರೀಕ್ಷಾ ಕೇಂದ್ರ | **ಪ್ರವೇಶ ಪತ್ರದಲ್ಲಿ ಸೂಚಿಸಿರುವಂತೆ** |
| 6 | ಪರೀಕ್ಷೆಯ ದಿನದಂದು ತರಬೇಕಾದ ವಸ್ತುಗಳು | ಪ್ರವೇಶ ಪತ್ರ ಮತ್ತು ನೀಲಿ / ಕಪ್ಪು ಬಾಲ್ ಪಾಯಿಂಟ್ ಪೆನ್ನುಗಳು |

## ಪರೀಕ್ಷಾ ವೇಳಾ ಪಟ್ಟಿ

| ಕ್ರಮ ಸಂಖ್ಯೆ | ಪರೀಕ್ಷಾ ದಿನಾಂಕ | 07/12/2025 ಭಾನುವಾರ | |
|---|---|---|---|
| | | ಪತ್ರಿಕೆ–1 | ಪತ್ರಿಕೆ 2 |
| 1 | ಪರೀಕ್ಷಾ ಕೊಠಡಿಗೆ ಪ್ರವೇಶಿಸುವ ಸಮಯ | 9.00 A.M | 1.30 P.M |
| 2 | ಪ್ರವೇಶ ಪತ್ರಗಳ ಪರಿಶೀಲನೆ | 9.00 ರಿಂದ 9.15 A.M | 1.30 ರಿಂದ 1.45 P.M |
| 3 | ಪರೀಕ್ಷಾ ಕೊಠಡಿಗೆ ಕೊನೆಯ ಪ್ರವೇಶಾವಕಾಶ | 9.15 A.M | 1.45 P.M |
| 4 | ಪರೀಕ್ಷಾ ಪುಸ್ತಿಕೆಗಳ ವಿತರಣೆ | 9.15 A.M | 1.45 P.M |
| 5 | ಉತ್ತರ ಪತ್ರಿಕೆಗಳನ್ನೊಳಗೊಂಡ ಪರೀಕ್ಷಾ ಪುಸ್ತಕಗಳ ಸೀಲನ್ನು ತೆಗೆಯುವುದು | 9.25 A.M | 1.55 P.M |
| 6 | ಪರೀಕ್ಷಾ ಪ್ರಾರಂಭ | 9.30 A.M | 2.00 P.M |
| 7 | ಪರೀಕ್ಷೆ ಮುಕ್ತಾಯ | 12.00 ಘಂಟೆ ಮಧ್ಯಾಹ್ನ | 4.30 P.M |

(ವಿಕಾಸ್ ಕಿಶೋರ್ ಸುರಳ್ಕರ್)
ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು

ದಿನಾಂಕ: **18/10/2025**